ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	339
2)	ಸದಸ್ಯರ ಹೆಸರು	ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಚುನಾಯಿತರಾದವರು)
3)	ಉತ್ತರಿಸಬೇಕಾದ ದಿನಾಂಕ	03-02-2021
4)	ಉತ್ತರಿಸಬೇಕಾದ ಸಚಿವರು	ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಲ್ಲಿ ಮೀನುಗಾರಿಕೆ ನಡೆಸಲು ಲಭ್ಯವಿರುವ ಮೀನುಗಾರಿಕೆ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಜಲ ಸಂಪನ್ಮೂಲಗಳು ಯಾವುವು (ಮಾಹಿತಿ ನೀಡುವುದು) ಸದರಿ ಜಲಸಂಪನ್ಮೂಲಗಳನ್ನು ಯಾವ ರೀತಿ ಅಭಿವೃದ್ಧಿಪಡಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	ಹಾಸನ ಜಿಲ್ಲೆಯಲ್ಲಿ ಮೀನುಗಾರಿಕೆ ನಡೆಸಲು ಮೀನುಗಾರಿಕೆ ಇಲಾಖೆ ವ್ಯಾಪ್ತಿಯ 172 ಇಲಾಖೆ ಕೆರೆಗಳು, 3 ಜಲಾಶಯಗಳು ಮತ್ತು 97 ಕಿ.ಮೀ. ನದಿ ಭಾಗಗಳು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ 3608 ಕೆರೆಗಳು ಮೀನುಗಾರಿಕೆಗೆ ಲಭ್ಯವಿರುತ್ತವೆ. ಜಿಲ್ಲೆಯಲ್ಲಿರುವ ಜಲಸಂಪನ್ಮೂಲಗಳನ್ನು ಗುತ್ತಿಗೆ ಪಡೆದ ಗುತ್ತಿಗೆದಾರರು ವಿಸ್ತೀರ್ಣಕ್ಕನುಗುಣವಾಗಿ ಮೀನುಮರಿಗಳನ್ನು ದಾಸ್ತಾನು ಮಾಡುತ್ತಾರೆ. ಸದರಿ ಜಲಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಈ ಕೆಳಗೆ ತಿಳಿಸಿದ ವಿವಿಧ ಯೋಜನೆಗಳನ್ನು ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. • "ಮತ್ಸ್ಯಕೃಷಿ ಆಶಾಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ ರೂ. 27,000-00 ಗಳನ್ನು ನೀಡಲಾಗುತ್ತಿದೆ. • ರಾಜ್ಯದ ಜಲಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ ಬಲಿತ ಬಿತ್ತನೆ ಮೀನುಮರಿಗಳನ್ನು ಬಿತ್ತನೆ ಮಾಡಲಾಗುತ್ತಿದೆ. • ಸರ್ಕಾರಿ ಸ್ವಾಮ್ಯದ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/-ಗಳ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನುಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್

		ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000-00 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. • ರಾಜ್ಯದ ಆಯ್ದ ಜಲಾಶಯಗಳಲ್ಲಿ ಬಲಿತ ಮೀನು ಮರಿಗಳನ್ನು ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬಲಿತ ಬಿತ್ತನೆ ಮೀನುಮರಿಗಳನ್ನು ನೋಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುವುದು. ಜಲಾಶಯ / ಕೆರೆಗಳ / ನದಿಭಾಗಗಳ ತಾಲ್ಲೂಕುವಾರು ಪಟ್ಟಿಯನ್ನು **<u>ಅನುಬಂಧ-1 ಮತ್ತು ಅನುಬಂಧ-2</u>** ರಲ್ಲಿ ನೀಡಲಾಗಿದೆ.
ಆ)	ಸದರಿ ಜಲ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ವಾರ್ಷಿಕವಾಗಿ ಅಗತ್ಯ ವಿರುವ ಮೀನುಮರಿಗಳ ಪ್ರಮಾಣ ಎಷ್ಟು ಮತ್ತು ಹಾಸನ ಜಿಲ್ಲೆಗೆ ಇಲಾಖೆಯಿಂದ ವಾರ್ಷಿಕವಾಗಿ ಸರಬರಾಜು ಆಗುತ್ತಿರುವ ಮೀನುಮರಿ ಪ್ರಮಾಣವೆಷ್ಟು; (ಕಳೆದ 3 ವರ್ಷಗಳ ಮಾಹಿತಿ ನೀಡುವುದು	ಸದರಿ ಜಲಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ವಾರ್ಷಿಕವಾಗಿ ಅಂದಾಜು 263 ಲಕ್ಷ ಮೀನುಮರಿಗಳ ಅಗತ್ಯವಿರುತ್ತದೆ. ಹಾಸನ ಜಿಲ್ಲೆಯಲ್ಲಿರುವ ಮೀನುಮರಿ ಪಾಲನಾ ಕೇಂದ್ರಗಳಿಂದ, ಇಲಾಖೆಯಿಂದ ವಾರ್ಷಿಕವಾಗಿ ಸರಬರಾಜು ಆಗುತ್ತಿರುವ ಮೀನುಮರಿಗಳ ಪ್ರಮಾಣ ವರ್ಷವಾರು ವಿವರ ಕೆಳಕಂಡಂತಿದೆ. <table><tr><th rowspan="2">ವರ್ಷ</th><th colspan="2">ಪ್ರಮಾಣ (ಲಕ್ಷಗಳಲ್ಲಿ)</th></tr><tr><th>ವಾರ್ಷಿಕ ಗುರಿ</th><th>ಸರಬರಾಜು</th></tr><tr><td>2017-18</td><td>24.50</td><td>21.82</td></tr><tr><td>2018-19</td><td>53.50</td><td>34.13</td></tr><tr><td>2019-20</td><td>53.50</td><td>23.94</td></tr><tr><td>2020-21</td><td>53.50</td><td>23.35 (ಡಿಸೆಂಬರ್ 2020 ರ ಅಂತ್ಯಕ್ಕೆ)</td></tr></table>
ಇ)	ಹಾಸನ ಜಿಲ್ಲೆಯಲ್ಲಿ ಮೀನುಮರಿಗಳಿಗೆ ಬಹಳ ಬೇಡಿಕೆ ಇದ್ದು, ಮೀನುಮರಿ ಉತ್ಪಾದನೆ ಮಾಡಲು ಅನುಕೂಲಕರ ಸ್ಥಳಗಳಿದ್ದರೂ ಸಹ ಜಿಲ್ಲೆಯಲ್ಲಿ ಮೀನುಮರಿ ಉತ್ಪಾದನಾ ಕೇಂದ್ರ ಸ್ಥಾಪನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಹೌದು.

ಈ)	ಬಂದಿದ್ದಲ್ಲಿ, ಯಾವ ಪ್ರದೇಶದಲ್ಲಿ ಮೀನುಮರಿ ಉತ್ಪಾದನಾ ಕೇಂದ್ರ ಸ್ಥಾಪನೆ ಮಾಡಲಾಗುವುದು. ಯಾವ ಕಾಲಮಿತಿ ಯೊಳಗೆ ಉತ್ಪಾದನಾ ಕೇಂದ್ರ ಮಾಡಿ ರೈತರಿಗೆ ಮೀನುಮರಿಗಳನ್ನು ಸರಬರಾಜು ಮಾಡಲಾಗುವುದು? (ವಿವರ ನೀಡುವುದು)	ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಗಚಿ ಜಲಾಶಯದ ಕೆಳ ಭಾಗದಲ್ಲಿ ಕಸಬಾ ಹೋಬಳಿ ಚಿಕ್ಕ ಬ್ಯಾಡಿಗೆರೆ ಗ್ರಾಮಕ್ಕೆ ಸೇರಿದ 20 ಎಕರೆ ಸರ್ಕಾರಿ ಜಮೀನನ್ನು ಕಾವೇರಿ ನೀರಾವರಿ ನಿಗಮದಿಂದ ಮೀನುಗಾರಿಕೆ ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಈಗಾಗಲೇ ಪತ್ರ ವ್ಯವಹಾರ ಮಾಡಲಾಗಿದೆ. ಜಮೀನು ಹಸ್ತಾಂತರವಾದ ನಂತರ ಮೀನುಮರಿ ಉತ್ಪಾದನಾ ಕೇಂದ್ರ ಸ್ಥಾಪಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು.

ಸಂಖ್ಯೆ: ಪಸಂಮೀ ಇ-43 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು ಇವರ ಚುಕ್ಕೆ ಗುರುತಿಲ್ಲದ ಪ್ರ ಸಂಖ್ಯೆ: 339ರ

ಅನುಬಂಧ-1

ಇಲಾಖೆ ಕೆರೆಗಳು ,ಜಲಾಶಯ ಮತ್ತು ನದಿಭಾಗ

ಕ್ರ.ಸಂ	ತಾಲ್ಲೂಕು	ಕೆರೆಗಳ ಸಂ.	ಜಲ ವಿಸ್ತೀರ್ಣ (ಹೆ.)	ವಿಲೇವಾರಿ ವಿಧಾನ				
				ಟೆಂಡರ್ ಕಂ ಹರಾಜು	ನೇರ ಗುತ್ತಿಗೆ	ಕೆರೆಗಳಿಗೆ ಬಿತ್ತನೆ ಮಾಡಿದ ಮೀನುಮರಿಗಳು (ಸಂ.:ಲಕ್ಷಗಳಲ್ಲಿ)	ವಿತರಿಸಿದ ಪರವಾನಿಗೆ (ಸಂಖ್ಯೆ)	
							ನದಿಭಾಗ	ಜಲಾಶಯ
1	ಅರಸೀಕೆರೆ	38	2877.07	6	1	15.02	0	0
2	ಅರಕಲಗೂಡು	22	440.93	20	2	12.01	9	0
3	ಆಲೂರು	4	13.04	4	0	3.05	5	0
4	ಬೇಲೂರು	31	784.85	23	2	12	0	160
5	ಚನ್ನರಾಯಟಪ್ಟಣ	30	2490.73	9	7	11	0	0
6	ಹಾಸನ	36	2131.99	21	3	14	6	0
7	ಹೊಳೆನರಸೀಪುರ	11	604.8	11	0	10.2	26	0
8	ಸಕಲೇಶಪುರ	0	0	0	0	0	12	0
9	ಹಾಸನ (ಗೊರೂರು)	0	0	0	0	0	0	110
	ಒಟ್ಟು	172	9343.41	94	15	77.28	58	270

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:339 ರ

ಅನುಬಂಧ-2

ಗ್ರಾಮ ಪಂಚಾಯಿತಿ ಕೆರೆಗಳು

ಕ್ರ.ಸಂ	ತಾಲ್ಲೂಕು	ಕೆರೆಗಳ ಸಂ.	ಜಲ ವಿಸ್ತೀರ್ಣ (ಹೆ.)	ಮತ್ಸ್ಯಪಾಲನೆಗೆ ಅಳವಡಿಸಿದ ಕೆರೆಗಳು	ಕೆರೆಗಳಿಗೆ ಬಿತ್ತನೆ ಮಾಡಿದ ಮೀನುಮರಿಗಳು (ಸಂ.:ಲಕ್ಷಗಳಲ್ಲಿ)
1	ಅರಸೀಕೆರೆ	124	1741.09	3	1.50
2	ಅರಕಲಗೂಡು	791	1843.97	9	2.90
3	ಆಲೂರು	809	962.14	4	2.30
4	ಬೇಲೂರು	591	1309.79	8	3.50
5	ಚನ್ನರಾಯಟಪ್ಟಣ	120	2147.75	13	4.60
6	ಹಾಸನ	948	3288.63	12	3.80
7	ಹೊಳೆನರಸೀಪುರ	157	1768.75	8	3.50
8	ಸಕಲೇಶಪುರ	68	100.75	1	0.30
	ಒಟ್ಟು	3608	13162.87	58	22.40